# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 222 (289) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 12.08.2025 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಲ್ಯಾಣ ಕರ್ನಾಟಕ ಭಾಗದಲ್ಲಿ ಉದ್ಯೋಗ ಸೃಷ್ಟಿ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಮಾಡಲು ಇಚ್ಛಿಸಿರುವ ಬಂಡವಾಳ ಹೂಡಿಕೆಗಳು ಮತ್ತು ಕೈಗಾರಿಕಾ ನಿರ್ಮಾಣ ಕಾಮಗಾರಿಗಳು ಯಾವುವು; | ಕಲ್ಯಾಣ ಕರ್ನಾಟಕ ಜಿಲ್ಲೆಗಳಾದ ಬೀದರ್, ಕಲಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಕಳೆದ 2013-14 ನೇ ಸಾಲಿನಿಂದ ಪ್ರಸ್ತುತದವರೆಗೆ (2025 ನೇ ಸಾಲಿನ ಜುಲೈ ಮಾಹೆಯ ಅಂತ್ಯದವರೆಗೆ) ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಗಳಲ್ಲಿ ಒಟ್ಟು 422 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ ರೂ.2,25,342 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಮತ್ತು 1,30,395 ಉದ್ಯೋಗಾವಕಾಶಗಳನ್ನು ನಿರೀಕ್ಷಿಸಲಾಗಿದೆ.<br><br>ಇವುಗಳ ಪೈಕಿ 95 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ ರೂ.76,416 ಕೋಟಿ ಮೊತ್ತದ ಬಂಡವಾಳ ಹೂಡಿಕೆಯಾಗಿದೆ ಹಾಗೂ 52,748 ಜನರಿಗೆ ಉದ್ಯೋಗ ಸೃಜನೆಯಾಗಿದೆ. |
| ಆ | ಈ ಭಾಗದಲ್ಲಿ ಉದ್ಯೋಗ ಸೃಷ್ಟಿ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಜಾಗತಿಕ ಬಂಡವಾಳ ಸಮಾವೇಶವನ್ನು ಆಯೋಜಿಸುವ ಆಲೋಚನೆ ಏನಾದರೂ ಇದೆಯೇ: ಇದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಳ್ಳಬಹುದಾದ ಕ್ರಮವೇನು; (ವಿವರ ನೀಡುವುದು) | ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೂಡಿಕೆದಾರರ ಸಮಾವೇಶ ಹಮ್ಮಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಪ್ರಸ್ತುತ ಇರುವುದಿಲ್ಲ. |
| ಇ | ಪ್ರಸ್ತುತ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿರುವ ಬೃಹತ್ ಕೈಗಾರಿಕೆಗಳು ಎಷ್ಟು ಮತ್ತು ಅವು ಯಾವುವು; ಈ ಕೈಗಾರಿಕೆಗಳಲ್ಲಿ ಒಟ್ಟು ಎಷ್ಟು ಜನ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ; | ಮಾಹಿತಿಯನ್ನು ಕ್ರಮ ಸಂಖ್ಯೆ (ಅ) ರಲ್ಲಿ ಒದಗಿಸಿದೆ. |

| | | |
|---|---|---|
| ಈ | ಕಲ್ಯಾಣ ಕರ್ನಾಟಕ ಭಾಗದಲ್ಲಿ ಈಗಾಗಲೇ ಅನುಮೋದನೆಗೊಂಡ ಜವಳಿ ಪಾರ್ಕ್ ಸ್ಥಾಪನೆಯು ಯಾವ ಹಂತದಲ್ಲಿದೆ; ಜವಳಿ ಪಾರ್ಕ್ ಸ್ಥಾಪನೆ ಕಾಮಗಾರಿಯು ತುಂಬಾ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು; ಕಾಮಗಾರಿ ಪೂರ್ಣಗೊಂಡಿರುವ ಕೈಗಾರಿಕೆಯನ್ನು ಪ್ರಾರಂಭಿಸುವುದು ಯಾವಾಗ; | ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಉ | ಜವಳಿ ಪಾರ್ಕ್ ಯೋಜನೆಯ ವಿಸ್ತೃತ ಯೋಜನಾ ವರದಿ ಹಾಗೂ ರೂಪುರೇಷೆಗಳೇನು? (ಮಾಹಿತಿಯನ್ನು ಒದಗಿಸುವುದು) | ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ. |

ಕಡತ ಸಂಖ್ಯೆ ಸಿಐ 243 ಎಸ್‌ಪಿಐ 2025

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅನುಬಂಧ-1

- ಭಾರತ ಸರ್ಕಾರದ ಜವಳಿ ಮಂತ್ರಾಲಯವು ದೇಶಾದ್ಯಂತ 1. ತಮಿಳುನಾಡು 2. ಕರ್ನಾಟಕ 3. ಗುಜರಾತ್ 4. ಮಧ್ಯಪ್ರದೇಶ 5. ಉತ್ತರಪ್ರದೇಶ 6. ತೆಲಂಗಾಣ 7. ಮಹಾರಾಷ್ಟ್ರ ಹೀಗೆ ಒಟ್ಟು ಏಳು(07) ರಾಜ್ಯಗಳಲ್ಲಿ PM-MITRA Park ಸ್ಥಾಪನೆಗೆ ನಿರ್ಧರಿಸಿದ್ದು, ಅದರನ್ವಯ Project Approval Committeeಯು ದಿನಾಂಕ:25-08-2023 ರಂದು ಕರ್ನಾಟಕದ ಕಲಬುರಗಿಯಲ್ಲಿ Greenfield PM-MITRA Park ಸ್ಥಾಪನೆಗೆ ಆಯ್ಕೆಯಾಗಿರುವುದನ್ನುಅಧಿಕೃತವಾಗಿ ತಿಳಿಸಿರುತ್ತಾರೆ.

- ದಿನಾಂಕ:27-03-2024 ರಂದು ಕಂಪನಿ ಕಾಯ್ದೆಯನ್ವಯ Pradhan Mantri Mega Integrated Textile Regions and Apparels (PM-MITRA) Park Karnataka Ltd, ಎಂಬ ಹೆಸರಿನ Special Purpose Vehicle (ಎಸ್.ಪಿ.ವಿ) ಕಂಪನಿಯು ನೋಂದಣಿಯಾಗಿರುತ್ತದೆ.

- ಸದರಿ ಕಂಪನಿಯಲ್ಲಿ ರಾಜ್ಯ ಸರ್ಕಾರದ ಷೇರು ಶೇ.51 ರಷ್ಟು ಹಾಗೂ ಕೇಂದ್ರ ಸರ್ಕಾರದ ಷೇರು ಶೇ.49 ರ ಅನುಪಾತದಲ್ಲಿ ಹೂಡಬೇಕಾಗಿರುತ್ತದೆ. ರಾಜ್ಯ ಸರ್ಕಾರದ ಷೇರು ಬಂಡವಾಳ ರೂ.5.10 ಕೋಟಿ ದಿನಾಂಕ:24.03.2024 ಹಾಗೂ ದಿನಾಂಕ:24.09.2024 ರಂದು ಬಿಡುಗಡೆಯಾಗಿದ್ದು, ಕೇಂದ್ರ ಸರ್ಕಾರದ ಷೇರು ಬಂಡವಾಳ ರೂ.4.90 ಕೋಟಿ ಮಾರ್ಚ್-2025 ರಂದು ಬಿಡುಗಡೆಯಾಗಿರುತ್ತದೆ.

- ರಾಜ್ಯ ಸರ್ಕಾರವು SPVಗೆ ಸಾಂಕೇತಿಕ ದರದಲ್ಲಿ 1000 ಎಕರೆ ಜಮೀನನ್ನು(99 ವರ್ಷಗಳ ಅವಧಿಗೆ ಪ್ರತಿ ಎಕರೆಗೆ ರೂ.1 ರಂತೆ) ದಿನಾಂಕ:22.10.2024 ರಂದು ಹಸ್ತಾಂತರಿಸಲಾಗಿದೆ.

- ರಾಜ್ಯ ಸರ್ಕಾರವು PM-MITRA Parkನಲ್ಲಿ ನೀರು ಮತ್ತು ವಿದ್ಯುತ್ ಸರಬರಾಜಿಗೆ Kalaburagiಯಲ್ಲಿ ಸ್ಥಾಪಿತವಾಗುವ ಘಟಕಗಳಿಗೆ ಪ್ರತಿ ಯೂನಿಟ್ ವಿದ್ಯುತ್‌ಗೆ ರೂ.5/- ಕ್ಕಿಂತ ಕಡಿಮೆ ದರದಲ್ಲಿ ವಿದ್ಯುತ್ ಹಾಗೂ ಪ್ರತಿ 1000 ಲೀಟರ್‌ಗಳಿಗೆ ರೂ.24/-ರಂತೆ (Rs.24 per KLD) ನೀರು ಸರಬರಾಜು ಮಾಡಲು ಒಪ್ಪಿಗೆ ನೀಡಲಾಗಿರುತ್ತದೆ.

- 2024-25ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-329ರಲ್ಲಿ **"ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಕಲಬುರಗಿ ಜಿಲ್ಲೆಯ 1,000 ಎಕರೆ ಪ್ರದೇಶದಲ್ಲಿ ಪಿ.ಪಿ.ಪಿ ಮಾದರಿಯಲ್ಲಿ ಮೆಗಾ ಜವಳಿ ಪಾರ್ಕ್‌ನ್ನು ಸ್ಥಾಪಿಸಲಾಗುತ್ತಿದೆ. ಇದರಿಂದ 1 ಲಕ್ಷ ಜನರಿಗೆ ನೇರ ಉದ್ಯೋಗ ಹಾಗೂ 2 ಲಕ್ಷ ಜನರಿಗೆ ಪರೋಕ್ಷ ಉದ್ಯೋಗ ಸೃಜನೆಯಾಗುವ ನಿರೀಕ್ಷೆಯಿದೆ"** ಎಂಬ ಘೋಷಣೆಗೆ ಸಂಬಂಧಿಸಿದಂತೆ, ಸದರಿ ಯೋಜನೆಗೆ ಪೂರಕವಾದ ಮೂಲಸೌಕರ್ಯಕ್ಕಾಗಿ ರಾಜ್ಯದ ಸಚಿವ ಸಂಪುಟವು ರೂ.390.26 ಕೋಟಿಗಳ ಅನುದಾನ ಒದಗಿಸಲು ನಿರ್ಣಯಿಸಿ ದಿನಾಂಕ:03.10.2024 ರಂದು ಸರ್ಕಾರದ ಆದೇಶ ಹೊರಡಿಸಲಾಗಿದೆ.

ಮುಂದುವರೆದು, ಕೆ.ಕೆ.ಆರ್.ಡಿ.ಬಿ ಇಂದ 2024-25 ನೇ ಸಾಲಿಗೆ ವಿವಿಧ ಮೂಲಭೂತ ಕಾಮಗಾರಿಗಳಿಗೆ ರೂ.40.21 ಕೋಟಿಗಳಿಗೆ ಅನುಮೋದನೆ ನೀಡಲಾಗಿದ್ದು, ಸದರಿ

...2

ಕಾಮಗಾರಿಗಳನ್ನು ಕೈಗೊಳ್ಳಲು ಅನುಷ್ಠಾನ ಇಲಾಖೆಗಳಿಗೆ ಅನುಮೋದಿತ ಅನುದಾನ ಬಿಡುಗಡೆ ಮಾಡುವಂತೆ ಕೆ.ಕೆ.ಆರ್.ಡಿ.ಬಿರವರಿಗೆ ಸೂಚಿಸಿ, ಅನುಷ್ಠಾನ ಇಲಾಖೆಗಳಿಗೆ ಟೆಂಡರ್ ಪ್ರಕ್ರಿಯೆಯನ್ನು ಶೀಘ್ರವಾಗಿ ಕೈಗೊಳ್ಳಲು ನಿರ್ದೇಶಿಸಲಾಗಿರುತ್ತದೆ.

- ದಿನಾಂಕ:17.09.2024 ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ PM-MITRA Park ಗೇಟ್‌ವರೆಗೆ ಮೂಲಭೂತ ಸೌಕರ್ಯ ಒದಗಿಸಲು ಅನುದಾನ ನೀಡಲು ಅನುಮೋದನೆಯಾಗಿರುತ್ತದೆ. ಜವಳಿ ಪಾರ್ಕ್ ಕುರಿತಂತೆ ರಸ್ತೆ, ನೀರು ಹಾಗೂ ವಿದ್ಯುತ್ ಅನ್ನು ಪಾರ್ಕ್ ಗೇಟ್‌ವರೆಗೆ ಒಟ್ಟು ಮೊತ್ತ ರೂ.390.2681 ಕೋಟಿಗಳಿಗೆ ದಿನಾಂಕ:03.10.2024 ರಂದು ಸರ್ಕಾರ ಆದೇಶ ಹೊರಡಿಸಿರುತ್ತಾರೆ.

- PM-MITRA ಮೆಗಾ ಜವಳಿ ಪಾರ್ಕ್ ಯೋಜನಾ ಪ್ರದೇಶದಿಂದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:50 ಕ್ಕೆ ಸಂಪರ್ಕ ಕಲ್ಪಿಸುವ (ಎರಡು ಬದಿ ಚರಂಡಿಗಳ ಜೋಡು) ರಸ್ತೆ ಹಾಗೂ ಅದರ ನಿರ್ಮಾಣದ ಕುರಿತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ಉಪ ವಿಭಾಗ ರವರು ರೂ.9.98 ಕೋಟಿಗಳ ಅಂದಾಜು ಪಟ್ಟಿಯಂತೆ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.

- PM-MITRA ಮೆಗಾ ಜವಳಿ ಪಾರ್ಕ್ ಯೋಜನಾ ಪ್ರದೇಶದಿಂದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:50 ಕ್ಕೆ ಸಂಪರ್ಕ ಕಲ್ಪಿಸುವ ಎರಡು ಬದಿ ಕಾಂಕ್ರಿಟ್ ಚರಂಡಿಗಳ ನಿರ್ಮಾಣಕ್ಕೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ಉಪ ವಿಭಾಗ ರವರು ರೂ.3.50 ಕೋಟಿಗಳ ಅಂದಾಜು ಪಟ್ಟಿಯಂತೆ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.

- PM-MITRA ಮೆಗಾ ಜವಳಿ ಪಾರ್ಕ್‌ಗೆ ವಸತಿ ಮತ್ತು ಕುಡಿಯುವ ನೀರಿನ ಉದ್ದೇಶಕ್ಕಾಗಿ ಮದ್ರಿ ಗ್ರಾಮದ ಬಳಿ ಭೀಮಾ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ನಿರ್ಮಿಸಿ 3.63 MLD ಪ್ರಮಾಣದ ನೀರನ್ನು ಒದಗಿಸಲು Executive Engineer, Minor Irrigation and Ground Water Development Division ಕಲಬುರಗಿ ರವರು 35.00 ಕೋಟಿಗಳಿಗೆ Line Estimate ನಂತೆ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.

- PM-MITRA ಮೆಗಾ ಜವಳಿ ಪಾರ್ಕ್‌ಗೆ ಕೈಗಾರಿಕಾ ಉದ್ದೇಶಕ್ಕಾಗಿ 12.09 MLD ನೀರನ್ನು ನಂದಿಕೂರು ಗ್ರಾಮದ STP ಯಿಂದ ಜವಳಿ ಪಾರ್ಕ್‌ಗೆ ನೀರು ಸರಬರಾಜು ಮಾಡಲು (STP Treated Water) ಹಾಗೂ ಪಾರ್ಕ್‌ಗೆ 3.63 MLD ಕುಡಿಯುವ ನೀರು ಮತ್ತು ಗೃಹ ಬಳಕೆಗೆ ಭೀಮಾ ನದಿ ಮದ್ರಿ ಗ್ರಾಮದಿಂದ ಸರಬರಾಜು ಮಾಡಲು ಪೈಪ್‌ಲೈನ್ ಮತ್ತು ಇತರೆ ಕಾಮಗಾರಿಗಳನ್ನು ಒಳಗೊಂಡಂತೆ ರೂ.116.00 ಕೋಟಿಗಳಿಗೆ Executive Engineer, Karnataka Urban Water Supply and Drainage Board Division, ಕಲಬುರಗಿ ರವರು ರೂ.35.00 ಕೋಟಿಗಳಿಗೆ Line Estimate ನಂತೆ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.

- PM-MITRA ಮೆಗಾ ಜವಳಿ ಪಾರ್ಕ್‌ಗೆ 180 MW ವಿದ್ಯುತ್ ಸರಬರಾಜು ಕುರಿತಂತೆ ಪಾರ್ಕ್‌ನಲ್ಲಿ Power Station ಸ್ಥಾಪಿಸುವ ಕುರಿತಂತೆ ರೂ.229.29 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು Chief Engineer, Electricity Transmission, Karnataka Power Transmission Corporation Limited (KPTCL) ಕಲಬುರಗಿ ರವರ Line Estimate ನಂತೆ ಟೆಂಡರ್ ಮುಖಾಂತರ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.

- ಭಾರತ ಸರ್ಕಾರದ ಗೆಜೆಟ್ ಅಧಿಸೂಚನೆ ದಿನಾಂಕ:14-09-2006 ರನ್ವಯ 500 ಹೆಕ್ಟೇರ್‌ಗಿಂತ ಕಡಿಮೆ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ಹಾಗೂ ಪಿಎಂ ಮಾರ್ಗಸೂಚಿಯನ್ವಯ Environmental Clearance ಪಡೆಯುವುದು ಕಡ್ಡಾಯವಾಗಿರುತ್ತದೆ. ಅದರನ್ವಯ Environmental Impact Assessment Study ಹಾಗೂ Environment Clearance ಪಡೆಯಲು ಆಯ್ಕೆಯಾಗಿರುವ M/s. Huber Enviro Care Systems Pvt. Ltd ರವರು ಯೋಜನಾ ಪ್ರದೇಶದಲ್ಲಿ ಕಾರ್ಯಗಳನ್ನು ಪ್ರಾರಂಭಿಸಿ Environment Clearance ಪಡೆಯಲು Parivesh Portalನಲ್ಲಿ TOR ನ್ನು upload ಮಾಡಲಾಗಿದ್ದು, ದಿನಾಂಕ:22-05-2025 ರಂದು ನಡೆದ Karnataka State expert Appraisal Committee ಸಭೆಯಲ್ಲಿ TOR ಅನುಮೋದನೆಯಾಗಿರುತ್ತದೆ.

- PM-MITRA Park ನ Transaction Advisor ಆಗಿ ಆಯ್ಕೆಯಾಗಿರುವ M/s. Wazir Advisors ರವರು ಆಯ್ಕೆಯಾಗಿರುತ್ತಾರೆ.

- Master Developer ಅನ್ನು ಆಯ್ಕೆ ಮಾಡಲು ಸಿದ್ಧಪಡಿಸಿರುವ RFP ಮತ್ತು DCA ದಾಖಲಾತಿಗಳನ್ನು ರಾಜ್ಯ ಸರ್ಕಾರದ ಕಾನೂನು ಇಲಾಖೆಯಿಂದ ಅನುಮೋದನೆ ಪಡೆಯಲಾಗಿರುತ್ತದೆ.

- Master Developer ಆಯ್ಕೆಗಾಗಿ ಸಿದ್ಧಪಡಿಸಿರುವ ಟೆಂಡರ್ ಡಾಕ್ಯುಮೆಂಟ್‌ಗಳು ಮತ್ತು DPR ಅನ್ನು ಜವಳಿ ಮಂತ್ರಾಲಯ, ಭಾರತ ಸರ್ಕಾರ ರವರು National Industrial Corridor Development Corporation (NICDC) ನಿಗಮದಿಂದ ಅನುಮೋದನೆ ಪಡೆದ ನಂತರ ರಾಜ್ಯದ PPPAC ಸಮಿತಿ ಸಭೆಯ ಅನುಮೋದನೆ ಪಡೆಯುವಂತೆ ತಿಳಿಸಿರುತ್ತಾರೆ. National Industrial Corridor Development Corporation (NICDC) ಪರಿಶೀಲನಾ ಹಂತದಲ್ಲಿರುತ್ತದೆ. ಅನುಮೋದನೆ ನಂತರ Master Developer ಅನ್ನು ಆಯ್ಕೆ ಮಾಡಲು ಟೆಂಡರ್ ಪ್ರಕ್ರಿಯೆ ಕೈಗೊಂಡು, ಆಯ್ಕೆಯಾಗುವ Master Developer ಮೂಲಕ ಕಾಮಗಾರಿಗಳನ್ನು ಯೋಜನೆಯನ್ವಯ ಅನುಷ್ಠಾನಗೊಳಿಸಲಾಗುವುದು.

- Environmental Clearance ಪಡೆಯಲು ಬಾಕಿ ಇರುವುದರಿಂದ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬವಾಗಿರುತ್ತದೆ.

ಅಪರ ನಿರ್ದೇಶಕರು (ಜವಳಿ ನೀತಿ),
ಕೈಮಗ್ಗ ಮತ್ತು ಜವಳಿ

ಅನುಬಂಧ-2

## 1.PM-MITRA Textile Park Project Cost

(Rs. in Cr.)

| Name of the Component | Total Cost |
|---|---|
| **Land** | **100.00** |
| **Factory Building** | **238.00** |
| **Common Infrastructure Facilities** | |
| Ground Development & Compound Wall | **18.00** |
| Roads | **135.00** |
| Storm Water Drainage System | **48.00** |
| Water Supply Distribution System | **22.00** |
| Rainwater Harvesting | **26.00** |
| Common Effluent Treatment Plant (CETP) | **284.00** |
| Sewerage Conveyance & Treatment Plant (STP) | **98.00** |
| Fire Fighting System | **9.00** |
| Electrical Distribution System | **339.00** |
| Street Lighting | **5.00** |
| Telecommunication | **5.00** |
| Land Scrapping and Green Belt Development | **6.00** |
| Boiler | **13.00** |
| Common Facilities Buildings | **409.00** |
| **Total - Common Infrastructure Facilities** | **1,416.00** |
| **Design Engineering & Supervision Fees (@2.5%)** | **41.00** |
| **Preliminary & Pre-operative Expenses** | **30.00** |
| **Total cost (excluding Land)** | **1,726.00** |
| **Total cost (including Land)** | **1,826.00** |

## 2. Raichur Textile Park Project Cost

(Rs. in Cr.)

| Sl. No. | Project Components | Landed Cost |
|---|---|---|
| 1 | Building Cost | 5.88 |
| 2 | Common Infrastructure | 16.65 |
| 3 | **Total Landed Construction Cost** | **22.53** |
| 4 | Contingency | 0.56 |
| 5 | Administrative Cost, Pre-op Expenses & PMC | 0.56 |
| 6 | Financing Charges | 0.90 |
| 7 | **Hard Cost** | **23.74** |
| 8 | IDC | 0.76 |
| 9 | **Total Project Cost** | **24.50** |

ಅಪರ ನಿರ್ದೇಶಕರು (ಜವಳಿ ನೀತಿ),
ಕೈಮಗ್ಗ ಮತ್ತು ಜವಳಿ